ಮೈಸೂರು ರಸ್ತೆ ಅಗಲೀಕರಣ, ಡಾಂಬರೀಕರಣ ಹಾಗೂ ವಾಹನ ದಟ್ಟಣೆ ನಿರ್ವಹಣೆ ಬಗ್ಗೆ.

85 (849); ಶ್ರೀ ನರೇಂದ್ರ ಆರ್. (ಹನೂರು)

ಅ) ಮೈಸೂರು ರಸ್ತೆಯ ರಾಜರಾಜೇಶ್ವರಿ ಗೋಪುರದಿಂದ ಪ್ರಾರಂಭಗೊಂಡು ಸಿರ್ಸಿ ವೃತ್ತ ದವರೆಗೆ ಸಂಚಾರ ದಟ್ಟಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಂಚಾರ ದಟ್ಟಣೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈವರೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಹೌದು

ಆ) ಮೈಸೂರು ರಸ್ತೆಯು ಅತ್ಯಂತ ಕಿರಿದಾಗಿದ್ದು, ಈ ರಸ್ತೆಯಲ್ಲಿ ಪೀಕ್ ಹವರ್ ಸಮಯದಲ್ಲಿ ಅಧಿಕ ಸಂಚಾರ ದಟ್ಟಣೆ ಇರುತ್ತದೆ. ರಾಜರಾಜೇಶ್ವರಿ ಗೋಪುರದಿಂದ ಗಾಳಿ ಆಂಜನೇಯ ದೇವಸ್ಥಾನದವರೆಗೆ ರಸ್ತೆಯು ಸಂಪೂರ್ಣ ಹಾಳಾಗಿದ್ದು, ಸದರಿ ರಸ್ತೆಯನ್ನು ಡಾಂಬರೀಕರಣಗೊಳಿಸಿದಲ್ಲಿ ಹಾಗೆಯೇ ಬಿ.ಡಿ.ಎ ಮೇಲು ಸೇತುವೆ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು, ಮೇಲು ಸೇತುವೆ ಕಾಮಗಾರಿ ಮುಗಿದ ನಂತರ ಸಂಚಾರ ದಟ್ಟಣೆಯ ಒತ್ತಡ ಕಡಿಮೆಯಾಗುತ್ತದೆ.

ಮೈಸೂರು ರಸ್ತೆ ಹಳೇ ಟೋಲ್‌ಗೇಟ್ ನಿಂದ ಸಿರ್ಸಿ ವೃತ್ತದವರೆಗೆ ರಸ್ತೆ ಅಗಲೀಕರಣ ಮಾಡಿದ್ದು, ಬೆಂಗಳೂರು ಬಾಡಿ ಬಿಲ್ಡರ್ ಜಂಕ್ಷನ್ ಬಳಿ ಸಂಚಾರ ಸಿಗ್ನಲ್ ಅಳವಡಿಸಲಾಗಿದ್ದು, ಸಂಚಾರ ಒತ್ತಡ ಕಡಿಮೆಯಾಗಿದೆ.

ಪೀಕ್ ಹವರ್ ಸಮಯ ಹೊರತುಪಡಿಸಿ ಉಳಿದ ಸಮಯದಲ್ಲಿ ಮೈಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಸಾಮಾನ್ಯ ಸ್ಥಿತಿಯಲ್ಲಿರುತ್ತದೆ.

ಇದಲ್ಲದೆ ರಾಜರಾಜೇಶ್ವರಿ ಗೋಪುರದಿಂದ ಸಿಸಿ ವೃತ್ತ ದವರೆಗೆ ಸಂಚಾರ ದಟ್ಟಣೆ ಮಾಡಲು ಈ ಕೆಳಕಂಡ ಜಂಕ್ಷನ್‌ಗಳಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್–5, ಸಹಾಯಕ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್–7, ಪೊಲೀಸ್ ಕಾನ್ಸ್‌ಟೇಬಲ್–19 ಮತ್ತು 04 ಗೃಹರಕ್ಷಕ ದಳದ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ.

1) ರಾಜರಾಜೇಶ್ವರಿ ಗೋಪುರ

2) ಪಂತರ ಪಾಳ್ಯ

3) ನಾಯಂಡಹಳ್ಳಿ ಜಂಕ್ಷನ್

4) ಕಿಂಕೋ ವೃತ್ತ

5) ಹೊಸಕೆರೆಹಳ್ಳಿ ಜಂಕ್ಷನ್

6) ಬಾಪೂಜಿ ನಗರ

7) ಕೆಎಸ್‌ಆರ್‌ಟಿಸಿ ಜಂಕ್ಷನ್

8) ಹೊಸಗುಡ್ಡದಹಳ್ಳಿ ಜಂಕ್ಷನ್

9) ಹಳೇ ಟೋಲ್‌ಗೇಟ್ ಜಂಕ್ಷನ್

10) ಬಾಡಿ ಬಿಲ್ಡರ್ ಜಂಕ್ಷನ್

11) ಸಿಸಿ ವೃತ್ತ

ಈ ರಸ್ತೆ ಸಂಚಾರ ವ್ಯಾಪ್ತಿಯು ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆ ಹಾಗೂ ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆ ಸರಹದ್ದಿಗೆ ಸೇರಿರುತ್ತದೆ. ಈ ಎರಡು ಠಾಣೆಯ ಇಬ್ಬರು ಪೊಲೀಸ್ ನಿರೀಕ್ಷಕರು ಪೀಕ್ ಹವರ್‌ನಲ್ಲಿ ಪ್ರಮುಖ ಜಂಕ್ಷನ್‌ಗಳಲ್ಲಿ

ವಾಹನ ದಟ್ಟಣೆ ನಿವರಣೆ ಮಾಡಲು ಸಂಚಾರ ಕರ್ತವ್ಯ ನಿರ್ವಹಿಸುತ್ತಾರೆ. ಅಲ್ಲದೆ, ಈ ಎರಡು ಠಾಣೆಯ ವ್ಯಾಪ್ತಿಗೆ ಇಬ್ಬರು ಸಹಾಯಕ ಪೊಲೀಸ್ ಆಯುಕ್ತರಿದ್ದು, ಇವರುಗಳು ಸಹ ಪೀಕ್ ಹವರ್ಸ್‌ನಲ್ಲಿ ಕೆಲಸ ಮಾಡಿ ಸುಗಮ ಸಂಚಾರ ಸುವ್ಯವಸ್ಥೆಯ ಬಗ್ಗೆ ಹೆಚ್ಚಿನ ಗಮನಹರಿಸಿ ಕಾಲ ಕಾಲಕ್ಕೆ ಸಿಬ್ಬಂದಿಯವರಿಗೆ ಮಾರ್ಗದರ್ಶನ ನೀಡುತ್ತಿರುತ್ತಾರೆ. ಅತಿಯಾದ ವಾಹನ ಸಂಚಾರ ದಟ್ಟಣೆಯಿದ್ದರೂ, ಪ್ರಸ್ತುತ ಸುಗಮ ಸಂಚಾರ ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗಿರುವುದಿಲ್ಲ.

ರಾಜರಾಜೇಶ್ವರಿ ಗೋಪುರದಿಂದ ಸಿರ್ಸಿ ವೃತ್ತ ದವರೆಗೆ ರಸ್ತೆಯ ಇಕ್ಕಲುಗಳಲ್ಲಿ ಯಾವುದೇ ವಾಹನ ನಿಲುಗಡೆಯಾಗದಂತೆ ಕಟ್ಟುನಿಟ್ಟಾಗಿ ಕ್ರಮ ವಹಿಸಲಾಗಿದೆ. ಈ ವ್ಯಾಪ್ತಿಯಲ್ಲಿ ವಿವಿಧ ರೀತಿಯ 30ಕ್ಕೂ ಹೆಚ್ಚು ಸಂಚಾರ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಈ ವ್ಯಾಪ್ತಿಯ ರಸ್ತೆ ಅವಘಾತಗಳು ಹಿಂದಿನ ವರ್ಷಕ್ಕೆ ತಾಳೆ ಮಾಡಿ ನೋಡಲಾಗಿ ಸಾಕಷ್ಟು ಇಳಿಮುಖವಾಗಿದೆ. ವಾಹನ ತಪಾಸಣೆ ಹೆಚ್ಚಿಸಿದ್ದು, ಸಾರ್ವಜನಿಕರು/ವಾಹನ ಚಾಲಕರು ಸವಾರರು/ಪಾದಚಾರಿಗಳಿಗೆ ರಸ್ತೆ ಸುರಕ್ಷತೆಯ ಅರಿವು ಉಂಟು ಮಾಡಲಾಗಿರುತ್ತದೆ.

ಈ ರಸ್ತೆಯಲ್ಲಿ ಬೆಳಿಗ್ಗೆ 07–00 ಗಂಟೆಯಿಂದ 11–00 ಗಂಟೆಯವರೆಗೆ ಹಾಗೂ ಸಂಜೆ 04–00 ಗಂಟೆಯಿಂದ ರಾತ್ರಿ 10–00 ಗಂಟೆಯವರೆಗೆ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ಸಹ ನಿರ್ಬಂಧಿಸಲಾಗಿರುತ್ತದೆ.

ಶ್ರೀ ಆರ್. ನರೇಂದ್ರ:– ಮಾನ್ಯ ಅಧ್ಯಕ್ಷರೆ, ಸುದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಏನಾಗಿದೆ, ಮೈಸೂರು ರಸ್ತೆಗೆ ಸುಮಾರು ಐದಾರು ಜಿಲ್ಲೆಗಳಿಂದ ಬೆಂಗಳೂರಿಗೆ ವಾಹನ ಬರುತ್ತವೆ. ರಸ್ತೆ ಬಹಳ ಕಿರಿದಾಗಿದೆ. ಇದು ಒಂದು. ಎರಡನೆಯದಾಗಿ ಇಲ್ಲಿ ಮೆಟ್ರೋ ಕಾಮಗಾರಿ ಹಾಗೂ ಮೇಲು ಸೇತುವೆ

ಕಾಮಗಾರಿ ನಡೆಯುತ್ತಿದೆ. ನಾಲ್ಕೈದು ವರ್ಷಗಳಿಂದ ಆ ರಸ್ತೆ ಗುಂಡಿ ಬಿದ್ದು ಹೋಗಿದೆ. ನಾವು ಕೊಳ್ಳೇಗಾಲದಿಂದ ರಾಜರಾಜೇಶ್ವರಿನಗರದ ತನಕ ಎರಡು ಗಂಟೆ ಸಮಯದಲ್ಲಿ ಬರುತ್ತೇವೆ. ರಾಜ ರಾಜೇಶ್ವರಿ ನಗರದಿಂದ ಶಾಸಕರ ಭವನಕ್ಕೆ ಹಾಗೂ ವಿಧಾನಸೌಧಕ್ಕೆ ಬರಬೇಕಾದರೆ ಸುಮಾರು ಒಂದರಿಂದ ಒಂದುವರೆ ಗಂಟೆ ಸಮಯ ಹಿಡಿಯುತ್ತದೆ. ಈ ರಸ್ತೆ ಹಾಳಾಗಿ ನಾಲ್ಕೈದು ವರ್ಷಗಳಾಯಿತು. ಬೆಂಗಳೂರು ಒಳಗಡೆ BBMPಯವರು ಈ ತರಹ ರಸ್ತೆ ಇಟ್ಟುಕೊಂಡರೆ ಹೇಗೆ?

ಅಧ್ಯಕ್ಷರು:– ಮಾನ್ಯ ಸದಸ್ಯರೇ, ಅವರು ಕೈಗೊಂಡ ಕ್ರಮಗಳನ್ನೆಲ್ಲಾ ಪಟ್ಟಿ ಮಾಡಿ ಕೊಟ್ಟಿದ್ದಾರೆ. ಇದರಲ್ಲಿ ಏನಾದರೂ ಕೊರತೆ ಇದೆಯೇ ಹೇಳಿ.

ಶ್ರೀ ಆರ್. ನರೇಂದ್ರ:– ಇವರು ಏನು ಮಾಡಿದ್ದಾರೆ ಅದನ್ನು ಹೇಳಿದ್ದಾರೆ. BBMPಯವರಿಗೆ ಹೇಳಿ ಗುಂಡಿಗಳನ್ನು ಮುಚ್ಚಿಸಿದರೆ ಅನುಕೂಲವಾಗುತ್ತದೆ. ಬರೀ ಪೊಲೀಸ್ ವ್ಯವಸ್ಥೆ ಹಾಕಿಕೊಂಡರೆ ಆಗುವುದಿಲ್ಲ.

ಅಧ್ಯಕ್ಷರು:– ಅವರು ಎಲ್ಲಾ ವಿವರವಾದ ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಆರ್. ನರೇಂದ್ರ:– ಆ ರಸ್ತೆಯಲ್ಲಿ ಮೇಲೆಸೇತುವೆ ಮಾಡುತ್ತಿದ್ದಾರೆ. ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ ರಸ್ತೆಗಳೆಲ್ಲಾ ಅಗೆದು ಬಿಟ್ಟಿದ್ದಾರೆ. ಒಂದು ಕಿ.ಮಿ. ರಸ್ತೆ ಪೂರ್ತಿ ಗುಂಡಿ ಬಿದ್ದು ಹೋಗಿದೆ.

ಅಧ್ಯಕ್ಷರು:– ಇದರ ಹೊರತಾಗಿ ಏನು ಆಗಬೇಕೆಂದು ಕೇಳಿ.

ಶ್ರೀ ಆರ್. ನರೇಂದ್ರ:– ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ತುರ್ತಾಗಿ ಆಗಬೇಕು. ತುರ್ತಾಗಿ ಮಾಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:– ಏನು ಮಾಡಬೇಕು?

ಶ್ರೀ ಆರ್. ನರೇಂದ್ರ:– ಆ ರಸ್ತೆಗಳ ಗುಂಡಿ ಮುಚ್ಚಿಸತಕ್ಕಂತಹ ಕೆಲಸ ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ರಸ್ತೆಗಳಿಗೆ ಗುಂಡಿ ಬಿದ್ದು ನಾಲ್ಕು ವರ್ಷಗಳಾದವು.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರಪಾಲಿಕೆಯ ಕಮಿಷನರ್‌ರವರು ಇಲ್ಲಿಯೇ ಇದ್ದಾರೆ. ನಾನು ಆದೇಶ ಕೊಡುತ್ತೇನೆ. ಲಕ್ಷ್ಮೀನಾರಾಯಣರವರೇ ನಮ್ಮ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ರಾಜರಾಜೇಶ್ವರಿ ದೇವಸ್ಥಾನದಿಂದ ಸಿರ್ಸಿ ಸರ್ಕಲ್‌ವರೆಗೆ ರೋಡ್ ಸಂಪೂರ್ಣವಾಗಿ ನಾಲ್ಕೈದು ವರ್ಷಗಳಿಂದ ಹಾಳಾಗಿದೆ. ನಾವು ಕಾರ್ಪೊರೇಷನ್‌ನಿಂದ ರಿಪೇರಿ ಮಾಡುವ ಕೆಲಸವನ್ನು ಆದಷ್ಟು ಬೇಗನೆ ಮಾಡಿಸಿ ಕೊಡುತ್ತೇನೆ.

ಯು.ಜಿ.ಡಿ ಹಾಗೂ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ವಹಣೆ

86 (1919); ಶ್ರೀ ವಿನಯ್ ಕುಲಕರ್ಣಿ

ಅ) ಧಾರವಾಡ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 3, 6 ಮತ್ತು 7 ರಲ್ಲಿ ಯು.ಜಿ.ಡಿ ಸೌಲಭ್ಯ ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕ್ಷೇತ್ರದಲ್ಲಿ ಒಳಚರಂಡಿ ನಿರ್ಮಾನ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಈ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು, ಈ ತೊಂದರೆ ನಿವಾರಣೆ ಮಾಡಲು ಹಾಗೂ ನಿರಂತರವಾಗಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸರ್ಕಾರ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ: (ಮಾಹಿತಿ ನೀಡುವುದು)?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ